ನಿರ್ಣಾಯಕವಾಗಿ ಬೇರೆ ಮಾಡುತ್ತದೆ.

ಈಕೆಯ ಬದುಕಿನ ಓದು ಈಕೆಯ ಬಗೆಗೆ ಗೌರವ ಮತ್ತು ಪ್ರೀತಿಯನ್ನು, ಆಕೆಯನ್ನು ಜೀವಂತ ಶವವಾಗಿಸುವ ವ್ಯವಸ್ಥೆಯ ಬಗೆಗೆ ಅಸಹ್ಯ ಮತ್ತು ಕೋಪವನ್ನು ಸಕಾರಣವಾಗಿ ಹುಟ್ಟಿಸುತ್ತದೆ. ಅನೇಕ ಬಾರಿ ಇಂಥ ಕೃತಿಗಳ ಓದು ನಮ್ಮಲ್ಲಿ ಈ ಎರಡನ್ನೂ ಬೇರೆ ಬೇರೆಯಾಗಿ ನೋಡಬೇಕಾದ ಅಗತ್ಯವನ್ನು ಕಳೆದುಬಿಡುತ್ತದೆ ಎನ್ನುವ ಕಾರಣಕ್ಕಾಗಿ ಈ ಸ್ಪಷ್ಟೀಕರಣವನ್ನು ನೀಡಬೇಕು.

ದತ್ತವಾದ ಬದುಕು, ನಿರ್ದೇಶಿತವಾದ ವ್ಯಕ್ತಿತ್ವ, ನಿಯಂತ್ರಣದಲ್ಲೇ ನಡೆಸಬೇಕಾದ ಸಂಸಾರ, ಈ ಎಲ್ಲದರಲ್ಲೂ ಈಕೆ ಪಡೆದ್ದಾದರೂ ಏನನ್ನು? 'ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ' ಎನ್ನುವ ತಾತ್ವಿಕತೆಯನ್ನು ಯಾರಿಂದಲೋ ಕಲಿತು ಈಕೆ ಬದುಕಿಗೆ ಅಳವಡಿಸಿಕೊಂಡದ್ದಲ್ಲ. ಅವಳ ಹುಟ್ಟುಗುಣ ಇದು. ಮಾವ, ಗಂಡ, ಅತ್ತೆ, ನೆಂಟರೆಂಬೋ ನೆಂಟರು, ಎಲ್ಲರಿಂದ ಅಕ್ಷರಶಃ ಚಿತ್ರಹಿಂಸೆ ಅನುಭವಿಸಿದರೂ ಮಗನ ಜೊತೆ ಕಾರಿನಲ್ಲಿ ಹೋಗುವಾಗ 'ನೋಡಮ್ಮ ಹುಡುಗಿ...' ಹಾಡನ್ನು ಕೇಳಿಸಿಕೊಳ್ಳುವ, 'ಬೊಂಬಾಟ್ ಭೋಜನ' ನೋಡುವ, ತನ್ನಿಷ್ಟದ ನಾಯಕ- ನಾಯಕಿಯರ ಸಿನಿಮಾಗಳನ್ನು ಅದೆಷ್ಟು ಬಾರಿಯಾದರೂ ನೋಡುವ ಜೀವನೋತ್ಸಾಹ ಉಳಿಸಿಕೊಂಡದ್ದೋ, ಗಳಿಸಿಕೊಂಡದ್ದೋ? 'ನಾವು ಕೂಗುವಾ ಕೂಗು' ಕೃತಿಯ ನಾಯಕರನ್ನು ನೋಡಿದಾಗಲೂ ನನಗೆ ಇದೇ ಅಚ್ಚರಿ. ನಗರಗೇಡಿಗಳೆಲ್ಲ ದುರ್ಬಲರು, ಹೇಡಿಗಳು ಎಂದೇನಲ್ಲ, ಆದರೆ ಈ ಗಟ್ಟಿತನಕ್ಕೆ ಇವರು ಮಾತ್ರ ಸಾಟಿ.

ಹೋರಾಟದ ಬದುಕಲ್ಲದೆ ಬದುಕಿನ ಅನುಕ್ಷಣವೂ ಹೋರಾಟವಾದರೂ ಸ್ವಾಭಿಮಾನ ಎಂಥದ್ದು? ಮಗನ ಜೊತೆ ಜಗಳವಾಡಿ, ಆತ ಬಸ್ ಸ್ಟ್ಯಾಂಡ್‌ಗೆ ಬಿಡುತ್ತೇನೆಂದರೂ ಅಪರಿಚಿತವಾದ ಊರಿನಲ್ಲಿ ಏಕಾಂಗಿಯಾಗಿ ನುಗ್ಗಿ, ಮಠವೊಂದರಲ್ಲಿ ಉಳಿದುಕೊಂಡು ಊರು ಸೇರುವ ಈಕೆಯ ಛಾತಿ ಕಂಡು ಅಬ್ಬಾ ಎನ್ನಿಸುತ್ತದೆ. ಕಿಲಾಡಿತನವೇನು ಕಡಿಮೆಯೇ? ಮಗ ಇಷ್ಟಪಟ್ಟ ಹೆಣ್ಣನ್ನು ದಾರಿಯಿಂದ ಸರಿಸಲು ಈಕೆ ಹೂಡುವ ಉಪಾಯಗಳು ಯಾವ ತಂತ್ರಗಾರರಿಗೆ ಕಮ್ಮಿ? ಯಾವ ಘಳಿಗೆಯಲ್ಲಿ ಬೇಕಾದರೂ ಮುಗಿಸಿಕೊಂಡು ಬಿಡೋಣ ಎನ್ನುವಂಥ ದಾರುಣದ ಬದುಕು ಇವಳಿಗೆ ಬಾಳಿ ಬದುಕಬೇಕಾದ ಸಂಗತಿಯಾಗಿ ಕೊನೆಯ ಘಳಿಗೆಯವರೆಗೂ ಕಂಡಿತಲ್ಲ, ಇದನ್ನೇ ನಾನು ಹೆಣ್ಣಿನ ಅಪೂರ್ವ ಕಥನ ಎಂದು ಕರೆಯುತ್ತಿರುವುದು. ಹೀಗೆ ಹೇಳುತ್ತಿರುವಾಗಲೂ ಒಂದು ಹಿಂಜರಿಕೆ ಕಾಡುತ್ತದೆ, ನಮ್ಮ ಕಥೆ ಹೇಗಿದ್ದರೂ ನಾವು ಹೀಗೇ ಬದುಕುತ್ತೇವೆ ನೋಡಿ ಎನ್ನುವ ಸಂದೇಶ ಅಂತಿಮವಾಗಿ, ಅವಳ ಕಥೆಯಲ್ಲಿ ಬದಲಾವಣೆಗಳು ಇಲ್ಲದಿದ್ದರೂ ನಡೆಯುತ್ತದೆ ಎನ್ನುವ ಯಥಾಸ್ಥಿತಿ ಮುಂದುವರಿಕೆಯ ಸಂದೇಶವನ್ನು ಗಂಡಾಳಿಕೆಗೆ ನೀಡಿಬಿಡುತ್ತದೆಯೇ? ನಿಜದಲ್ಲಿ ಮೃಗಗಳೇ ಇನ್ನಾದರೂ ಬದಲಾಗಿ ಎನ್ನುವ ಸಂದೇಶ ಇಲ್ಲಿದೆ. ಆದರೆ ಹೆಣ್ಣಿನ ಭಾಷೆಯನ್ನು ಲೋಕ ಕಲಿತೀತೆ?

'ರಾಗಿತೆನೆ' ಕೃತಿ ಏಕಕಾಲಕ್ಕೆ ಸ್ವಾನುಭವದ ಕಥನವಾಗುತ್ತಲೇ ಸಾಂಸ್ಕೃತಿಕ, ಸಾಮಾಜಿಕ ಕಥನವೂ ಆಗುತ್ತದೆ. ಮುಖ್ಯವಾಹಿನಿಗೆ ಸೇರುವ ಬುಡಕಟ್ಟುಗಳ ಪ್ರಯತ್ನಗಳು ಕೇವಲ ಸಾಮಾಜಿಕ, ಆರ್ಥಿಕ ಚಲನೆಗಳು ಮಾತ್ರವಾಗಿರುವುದಿಲ್ಲ. ಅವು ತಮ್ಮ ಹೊರ ಮತ್ತು ಒಳ ಸ್ವರೂಪಗಳೆರಡನ್ನೂ ಬದಲಿಸಿಕೊಳ್ಳಬೇಕಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಈ ಚಲನೆಯನ್ನು ತಮ್ಮಲ್ಲಿ ಲಯಗೊಳಿಸಿಕೊಳ್ಳುವ ಪ್ರಯತ್ನ ಮುಖ್ಯವಾಹಿನಿಯಲ್ಲೂ ಆಗಲೇಬೇಕು. ಆದರೆ ಅಲ್ಲಿ ಮಾತ್ರ ಯಾವಾಗಲೂ ಸೇಳೆಯದ್ದೇ ಪಾತ್ರ. ಬದಲಾದ ಹಾಗೆ ತೋರಿಸಿಕೊಳ್ಳುತ್ತಾ ಒಳಗೆ ಬದಲಾಗುವುದಿರಲಿ, ಮತ್ತೂಮತ್ತೂ ಸೆಟೆದು ಕೊಳ್ಳುವ ದಾರಿಯಲ್ಲೇ ಅದಿರುತ್ತದೆ. ಹೀಗಾಗಿ ಸಂದರ್ಭ ಜಟಿಲಗೊಳ್ಳುತ್ತಲೇ ಹೋಗುತ್ತದೆ. ನಿಮ್ಮೊಡನಿದ್ದೂ ನಿಮ್ಮಂತಾಗದೆ ಎನ್ನುವ ವಿಷಮ ಸನ್ನಿವೇಶದಲ್ಲಿ ಇಡೀ ಬದುಕನ್ನು ಕಳೆಯುವ ದುಸ್ಥಿತಿ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಎನ್ನುವ ದ್ವಂದ್ವದಲ್ಲಿ ತಮ್ಮದಲ್ಲದ ಬದುಕನ್ನು ಬದುಕುವ ನರಕ ಸೃಷ್ಟಿಯಾಗುತ್ತದೆ. ಸರಳವಾದ ಈ ಕೃತಿ ತನ್ನೊಡಲಲ್ಲಿ ಇನ್ನೂ ಅನೇಕ ಕೃತಿಗಳನ್ನು ಹುದುಗಿಸಿ ಕೊಂಡಿದೆ. ಅವೂ ಹೊರಬರಲಿ. ●